## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2023-24ನೇ ಸಾಲಿನ ನೇಕಾರರ ಯೋಜನೆ-ವಿದ್ಯುತ್ ಸಹಾಯಧನ ರಡಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ: ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕೈಜಇ/ ಜವಳಿ/ ಜಪ್ರಅ/ ಕ್ರಿ.ಯೋ/ 2023-24, ದಿನಾಂಕ:19.04.2023 ಮತ್ತು 15-06-2023.

*****

<u>ಪ್ರಸ್ತಾವನೆ:-</u>

2023-24ನೇ ಸಾಲಿನ ಜುಲೈ ಆಯವ್ಯಯದಲ್ಲಿ ನೇಕಾರರ ಯೋಜನೆ -ವಿದ್ಯುತ್ ಸಹಾಯಧನ ಯೋಜನೆಯ ಲೆಕ್ಕಶೀರ್ಷಿಕೆ:2851-00-103-0-03-106 (ಸಹಾಯಧನ) ರಡಿ ರೂ.6840.00 ಲಕ್ಷ, ಲೆಕ್ಕಶೀರ್ಷಿಕೆ: 2851-00-103-0-03-422(SCSP) ರಡಿ ರೂ.1530.00 ಲಕ್ಷ ಮತ್ತು ಲೆಕ್ಕಶೀರ್ಷಿಕೆ: 2851-00-103-0-03-423(TSP) ರಡಿ ರೂ.630.00 ಲಕ್ಷ ಹೀಗೆ ಒಟ್ಟಾರೆಯಾಗಿ ರೂ.9000.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪತ್ರಗಳಲ್ಲಿ 2023-24ನೇ ಸಾಲಿನ ಆಯವ್ಯಯದಲ್ಲಿ ನೇಕಾರರ ಯೋಜನೆ-ವಿದ್ಯುತ್ ಸಹಾಯಧನದಡಿ ಹಂಚಿಕೆಯಾಗಿರುವ ಒಟ್ಟು ಅನುದಾನ ರೂ.9000.00 ಲಕ್ಷಗಳಲ್ಲಿ, ಲೆಕ್ಕಶೀರ್ಷಿಕೆ: 2851-00-103-0-03-106(ಸಹಾಯಧನ) ರಡಿ ರೂ.1710.00 ಲಕ್ಷ, ಲೆಕ್ಕಶೀರ್ಷಿಕೆ: 2851-00-103-0-03-422(SCSP) ರಡಿ ರೂ.382.50 ಲಕ್ಷ ಮತ್ತು ಲೆಕ್ಕಶೀರ್ಷಿಕೆ: 2851-00-103-0-03-423(TSP) ರಡಿ ರೂ.157.50 ಲಕ್ಷ, ಹೀಗೆ ಒಟ್ಟಾರೆಯಾಗಿ ರೂ.2250.00 ಲಕ್ಷಗಳನ್ನು ಮೊದಲನೇ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಆರ್ಥಿಕ ಇಲಾಖೆಯೊಂದಿಗೆ ಸಮಲೋಚಿಸಿ, ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲು ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: CI 29 JAKY 2023(P-2), ಬೆಂಗಳೂರು, ದಿನಾಂಕ:30-09-2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿನ ಆಯವ್ಯಯದಲ್ಲಿ ನೇಕಾರರ ಯೋಜನೆ-ವಿದ್ಯುತ್ ಸಹಾಯಧನ ಯೋಜನೆಯ ಲೆಕ್ಕಶೀರ್ಷಿಕೆ:2851-00-103-0-03-106 (ಸಹಾಯಧನ) ರಡಿ ರೂ.3420.00 ಲಕ್ಷ, ಲೆಕ್ಕಶೀರ್ಷಿಕೆ:2851-00-103-0-03-422(SCSP) ರಡಿ ರೂ.765.00 ಲಕ್ಷ ಮತ್ತು ಲೆಕ್ಕಶೀರ್ಷಿಕೆ: 2851-00-103-0-03-423 (TSP) ರಡಿ ರೂ.315.00 ಲಕ್ಷ,

..2

ಹೀಗೆ ಒಟ್ಟಾರೆಯಾಗಿ ರೂ.4500.00 ಲಕ್ಷ(ನಾಲ್ಕು ಸಾವಿರದ ಐದು ನೂರು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆ ಹಾಗೂ ಲೆಕ್ಕಶೀರ್ಷಿಕೆ | 2023-24ನೇ ಸಾಲಿನ ಆಯವ್ಯಯ ಹಂಚಿಕೆ | ಬಿಡುಗಡೆ ಮಾಡಲಾದ ಅನುದಾನ |
|---|---|---|---|
| 1 | ನೇಕಾರರ ಯೋಜನೆ-ವಿದ್ಯುತ್ ಸಹಾಯಧನ | | |
| | ಸಹಾಯಧನ 2851-00-103-0-03-106 | 6840.00 | 3420.00 |
| | ಪರಿಶಿಷ್ಟ ಜಾತಿ ಉಪ ಯೋಜನೆ 2851-00-103-0-03-422 | 1530.00 | 765.00 |
| | ಗಿರಿಜನ ಉಪ ಯೋಜನೆ 2851-00-103-0-03-423 | 630.00 | 315.00 |
| | ಒಟ್ಟು | 9000.00 | 4500.00 |

ಈ ಅನುದಾನವನ್ನು ಸಂಬಂಧಪಟ್ಟ ಯೋಜನೆಯ ಲೆಕ್ಕಶೀರ್ಷಿಕೆಯಡಿಯಲ್ಲಿ ಮಾತ್ರ ವೆಚ್ಚ ಭರಿಸತಕ್ಕದ್ದು.

ಸದರಿ ಅನುದಾನವನ್ನು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆರವರ ಮೇಲು ರುಜುವಿನೊಂದಿಗೆ ಖಜಾನೆಯಿಂದ ಸಾದಿಲ್ವಾರು ಬಿಲ್ / ಪೇಯಿಸ್ ರಸೀದಿಯ ಮೂಲಕ ಹಣ ಪಡೆಯಲು ಲೆಕ್ಕಾಧಿಕಾರಿ, ಕೈಮಗ್ಗ ಮತ್ತು ಜವಳಿ ಇಲಾಖೆಯವರಿಗೆ ಅಧಿಕಾರ ನೀಡಿದೆ.

ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿರುವಂತೆ ಹಾಗೂ ಯೋಜನೆಯ ಮಾರ್ಗಸೂಚಿ ಅನುಸಾರ ಕಾರ್ಯಕ್ರಮ ಅನುಷ್ಠಾನಗೊಳಿಸತಕ್ಕದ್ದು.

01 ರಿಂದ 20 ಹೆಚ್.ಪಿ. ವರೆಗಿನ ವಿದ್ಯುತ್ ಮಗ್ಗ ಘಟಕಗಳಿಗೆ ವಿದ್ಯುತ್ ರಿಯಾಯಿತಿ ಸಹಾಯಧನವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸತಕ್ಕದ್ದು.

ನೇಕಾರರ ಯೋಜನೆಯಡಿ ವಿದ್ಯುತ್ ಸಹಾಯಧನ ಯೋಜನೆಗೆ ಒದಗಿಸಿರುವ ಅನುದಾನವನ್ನು ಖಜಾನೆಯಿಂದ ಡಿಸಿ ಬಿಲ್ಲುಗಳ ಮೂಲಕ ಸೆಳೆದು ನೇರವಾಗಿ (ESCOMS) ಗಳಿಗೆ ಪಾವತಿ ಮಾಡುವುದು, ಸದರಿ ಅನುದಾನವನ್ನು ಸೆಳೆದು ಬ್ಯಾಂಕ್ ಮೂಲಕ ನಿರ್ವಹಿಸತಕ್ಕದ್ದಲ್ಲ.

ಈ ಮೊತ್ತವನ್ನು ನೇರವಾಗಿ ರಾಜ್ಯದ ಖಜಾನೆಯಿಂದ ಸಂಬಂಧಪಟ್ಟ ESCOMS ಗಳಿಗೆ ವರ್ಗಾಯಿಸತಕ್ಕದ್ದು.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರು ನಿಷ್ಕ್ರಿಯ ಘಟಕಗಳನ್ನು ಪರಿಶೀಲಿಸಿ ಮತ್ತು RR ಸಂಖ್ಯೆಗಳು ಸಂಪರ್ಕ ಕಡಿತಗೊಂಡಿವೆ ಎಂದು ಖಚಿತಪಡಿಸಿಕೊಳ್ಳತಕ್ಕದ್ದು.

ರಾಜ್ಯದಲ್ಲಿ ಸ್ಥಾಪಿತವಾಗಿರುವ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಲ್ಲಿ ಮುಚ್ಚಿದ ಘಟಕಗಳನ್ನು ಗುರುತಿಸಿ ವಿದ್ಯುತ್ ಸಹಾಯಧನ ರದ್ದತಿಗೆ ESCOMS ಗಳಿಗೆ ಶಿಫಾರಸ್ಸು ಮಾಡತಕ್ಕದ್ದು ಹಾಗೂ ಅಂತಹ ಮುಚ್ಚಿದ ಘಟಕಗಳಿಗೆ Subsidy ಅನ್ನು ESCOMS ರದ್ದುಮಾಡಿರುವ ಬಗ್ಗೆ ಜವಳಿ ಅಭಿವೃದ್ಧಿ ಆಯುಕ್ತರು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು. ವೆಚ್ಚಗಳು ಪುನರಾವರ್ತಿತವಾಗದಂತೆ ಎಚ್ಚರವಹಿಸತಕ್ಕದ್ದು. ಹಣ ಬಳಕೆ ಮಾಡಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:FD 216 Exp-1/2023, ದಿನಾಂಕ: 12-09-2023 ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್.ಡಿ 07 ಟಿ.ಎಫ್.ಪಿ. 2023, ದಿನಾಂಕ: 31-07-2023 ರನ್ವಯ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಾವಿತ್ರಮ್ಮ.ಕೆ)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)(ಪ್ರ)

30/9/23

**ಗೆ,**

1. ಮಹಾಲೇಖಪಾಲರು (ಲೆಕ್ಕಪತ್ರ: ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ವನ ವಿಕಾಸ, 1 & 2ನೇ ಮಹಡಿ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.
3. ನಿರ್ದೇಶಕರು/ ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ(ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ- ರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನ ಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.